ಹೇಳಿ? ಅಲ್ಲಿಗೆ ಹೈಸ್ಕೂಲ್‌ನ್ನು ಯಾವಾಗ ಕೊಡುತ್ತೀರಿ ಎನ್ನತಕ್ಕಂಥದನ್ನು ಈ ಸದನದ ಮೂಲಕ ತಿಳಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಪ್ರೊ ಬಿ.ಕೆ. ಚಂದ್ರಶೇಖರ್:- ಮಾನ್ಯ ಅಧ್ಯಕ್ಷರೆ, ಪ್ರತಿ ವರ್ಷ ಪ್ರಸ್ತಾವನೆಯನ್ನು ಕಳುಹಿಸಿಕೊಡುತ್ತಿದ್ದೇನೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ, ಇಲಾಖೆ ಮತಿಯಿಂದ ಪ್ರಸ್ತಾವನೆ ಬಂದಿಲ್ಲವೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಕೆ. ಗೋಪಾಲ ಪೂಜಾರಿ:- ಮಾನ್ಯ ಅಧ್ಯಕ್ಷರೆ, ವಿದ್ಯಾ ಇಲಾಖೆ ಮತಿಯಿಂದಲೇ ಬಂದಿದೆ.

ಪ್ರೊ ಬಿ.ಕೆ. ಚಂದ್ರಶೇಖರ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರತಕ್ಕಂಥ ಈ ಪ್ರಶ್ನೆಗೆ ಇಲಾಖೆಯಿಂದ ಈ ಉತ್ತರವನ್ನು ಕಳುಹಿಸಿಕೊಟ್ಟಿದ್ದಾರೆ. ಹಾಗೆಯೇ ಇಲಾಖೆ ಮತಿಯಿಂದ ಪ್ರಸ್ತಾವನೆ ಬಂದಿಲ್ಲವೆಂದು ತಿಳಿಸಿರುತ್ತಾರೆ. ಒಂದು ವೇಳೆ ಪ್ರಸ್ತಾವನೆ ಬಂದಿಲ್ಲದೆ ಇದ್ದರೂ ಸಹ ಅತ್ಯಂತ ಅವಶ್ಯಕತೆ ಇರುವ ಸ್ಥಳದಲ್ಲಿ ಹೈಸ್ಕೂಲ್ ಪ್ರಾರಂಭ ಮಾಡುವುದಕ್ಕೆ ಮಾಹಿತಿಯನ್ನು ತರಿಸಿಕೊಳ್ಳಿ ಎಂದು ನಾನು ಈಗಾಗಲೇ ತಿಳಿಸಿದ್ದೇನೆ. ಆ ಪ್ರಸ್ತಾವನೆ ಇಲ್ಲದಿದ್ದರೂ ಕೂಡ ಇಲಾಖೆ ಮತಿಯಿಂದ ನಾನು ಪ್ರಸ್ತಾವನೆಯನ್ನು ತರಿಸಿಕೊಳ್ಳುತ್ತೇನೆಂದು ಈ ಸದನದ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಈಶಾನ್ಯ ವಲಯ ಶಿಕ್ಷಣ ನಿರ್ದೇಶನಾಲಯಕ್ಕೆ ಪ್ರಸಕ್ತ ವರ್ಷ ಸರ್ಕಾರ ನೀಡಿದ ಅನುದಾನ

173(1431) ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ(ತಿಕೋಟ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈಶಾನ್ಯ ವಲಯ ಶಿಕ್ಷಣ ನಿರ್ದೇಶನಾಲಯಕ್ಕೆ ಪ್ರಸಕ್ತ ವರ್ಷ ಸರ್ಕಾರ ನೀಡಿದ ಅನುದಾನ ಎಷ್ಟು?

ಆ) ಒದಗಿಸಲಾದ ಅನುದಾನವನ್ನು ನಿರ್ದೇಶನಾಲಯವು ಯಾವ ಉದ್ದೇಶಗಳಿಗಾಗಿ ವಿನಿಯೋಗಿಸಿದೆ?

ಇ) ಒದಗಿಸಲಾದ ಈ ಅನುದಾನದಿಂದ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಹೊಸ ಕಟ್ಟಡಗಳನ್ನು ನಿರ್ಮಿಸಲಾಗುವುದೆ:ಹಾಗಿದ್ದಲ್ಲಿ ಹಾಕಿಕೊಂಡ ಗುರಿ ಎಷ್ಟು?

ಈ) ಈ ನಿರ್ದೇಶನಾಲಯದ ವ್ಯಾಪ್ತಿಗೆ ಬರುವ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಿಗೆ ಕಟ್ಟಡಗಳನ್ನು ನಿರ್ಮಿಸಲಾಗುವುದು?

ಉ) ನಿರ್ಮಿಸಲಾಗುವ ಕಟ್ಟಡಗಳನ್ನು ಸರ್ಕಾರದ ನಿಯಮದಂತೆ ಆಯಾ ಸ್ಥಳೀಯ ಶಾಸಕರಿಂದ ಶಾಲೆಗಳ ಪಟ್ಟಿಗಳನ್ನು ಪಡೆದುಕೊಂಡು ನಿರ್ಮಿಸಲಾಗುವುದೆ?

ಊ) ಹಾಗಿದ್ದಲ್ಲಿ, ಆಯಾ ಶಾಸಕರು ತಮ್ಮ ಶಾಲೆಗಳ ಪಟ್ಟಿಯನ್ನು ಯಾರಿಗೆ ಕಳುಹಿಸಬೇಕು?

ಪ್ರೊ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ನಿರ್ದೇಶನಾಲಯದ ವೆಚ್ಚಗಳಿಗಾಗಿ ರೂ. 40.00 ಲಕ್ಷ.

ಆ) ಒದಗಿಸಿದ ಅನುದಾನ ರೂ. 40.00 ಲಕ್ಷಗಳು ಇನ್ನೂ ಬಿಡುಗಡೆಯಾಗಿಲ್ಲ.'

ಇ) ನಿರ್ದೇಶನಾಲಯಕ್ಕೆಂದೇ ಒದಗಿಸಲಾಗಿರುವ ರೂ. 40.00 ಲಕ್ಷಗಳಲ್ಲಿ ಯಾವುದೇ ಹೊಸ ಕಟ್ಟಡಗಳನ್ನು ನಿರ್ಮಿಸಲಾಗುವುದಿಲ್ಲ. ಆದರೆ ರಾಜ್ಯ ಮುಂದುವರೆದ ಯೋಜನೆಯಡಿ

ನಗರ:ಪಟ್ಟಣ ಪ್ರದೇಶಗಳಲ್ಲಿ ಪ್ರಾಥಮಿಕ ಶಾಲಾ ಕೊಠಡಿ ನಿರ್ಮಾಣ, ಪ್ರಧಾನಮಂತ್ರಿ ಗ್ರಾಮೋದಯ ಯೋಜನೆಯಡಿಯಲ್ಲಿ ಪ್ರಾಥಮಿಕ ಶಾಲಾ ಕೊಠಡಿ ನಿರ್ಮಾಣ ಮತ್ತು ಹನ್ನೊಂದನೆಯ ಹಣಕಾಸು ಆಯೋಗದಡಿಯಲ್ಲಿ ಬಿಡುಗಡೆಯಾಗಿರುವ ಅನುದಾನದಲ್ಲಿಯೂ ಪ್ರಾಥಮಿಕ ಶಾಲಾ ಕೊಠಡಿಗಳನ್ನು ನಿರ್ಮಿಸಲಾಗುವುದು. ಆರ್.ಐ.ಡಿ.ಎಸ್.ಅಡಿಯಲ್ಲಿ ಸರ್ಕಾರದ ಆರ್ಥಿಕ ನೆರವಿನೊಂದಿಗೆ ಪ್ರಾಥಮಿಕ ಶಾಲಾ ಕೊಠಡಿಗಳನ್ನು ನಿರ್ಮಿಸುತ್ತಿದ್ದು, ಅನುದಾನವನ್ನು ಶೀಘ್ರವಾಗಿ ಬಿಡುಗಡೆ ಮಾಡಲಾಗುವುದು.

ಈ) ಈ ನಿರ್ದೇಶನಾಲಯದ ವ್ಯಾಪ್ತಿಗೆ ಬರುವ ಜಿಲ್ಲೆಗಳಲ್ಲಿ ನಿರ್ಮಿಸಲು ಉದ್ದೇಶಿಸಿರುವ ಪ್ರಾಥಮಿಕಶಾಲೆ ಮತ್ತು ಪ್ರೌಢಶಾಲೆ ಕೊಠಡಿಗಳ ಸಂಖ್ಯೆಯನ್ನೊಳಗೊಂಡ ತಃಖ್ತೆಯನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಉ) ಇಲ್ಲ. ಸ್ಥಳೀಯ ಶಾಸಕರುಗಳು ನೀಡುವ ಶಾಲಾಪಟ್ಟಿಗೆ ಜಿಲ್ಲಾ ಪಂಚಾಯತ್ ಆಧ್ಯತೆ ನೀಡಬೇಕಾಗುತ್ತದೆ.

ಊ) ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮಾನ್ಯ ಶಾಸಕರುಗಳು ಪಟ್ಟಿ ನೀಡಬೇಕಾಗುತ್ತದೆ.

ಅನುಬಂಧ I

ಈಶಾನ್ಯವಲಯಕ್ಕೆ 2002-03ನೇ ಸಾಲಿನಲ್ಲಿ ಜಿಲ್ಲಾವಾರು ನಿರ್ಮಿಸಲಾಗುವ (ಪ್ರಾಥಮಿಕ ಶಾಲಾ ಕೊಠಡಿಗಳ ವಿವರ) ಹಾಗೂ ಹುಡ್ಕೋ ಯೋಜನೆಯಡಿಯಲ್ಲಿ ಪ್ರೌಢಶಾಲಾ ಕಟ್ಟಡ ನಿರ್ಮಾಣ ವಿವರ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ನಗರ ಪ್ರದೇಶದಲ್ಲಿ ಕೊಠಡಿ ನಿರ್ಮಾಣ	ಹನ್ನೊಂದೇ ಹಣಕಾಸು ಯೋಜನೆಯಡಿಯಲ್ಲಿ ಕೊಠಡಿ ನಿರ್ಮಾಣ	ಪ್ರಧಾನಮಂತ್ರಿ ಗ್ರಾಮೋದಯ ಯೋಜನೆಯಡಿಯಲ್ಲಿ ಕೊಠಡಿ ನಿರ್ಮಾಣ	ಆರ್.ಐ.ಡಿ.ಎಫ್ ಯೋಜನೆಯಡಿ ಕೊಠಡಿ ನಿರ್ಮಾಣ	ಹುಡ್ಕೋ ಯೋಜನೆಯಡಿ ನಿರ್ಮಿಸಲಾಗುವ ಪ್ರೌಢ ಶಾಲಾಕೊಠಡಿಗಳ ಸಂಖ್ಯೆ
1.	ಬೀದರ್	10	31	21	193	34
2.	ಗುಲ್ಬರ್ಗಾ	20	36	24	347	236
3.	ಕೊಪ್ಪಳ	7	27	18	348	53
4.	ರಾಯಚೂರು	18	41	26	446	63
5.	ಯಾದಗೀರ್	10	27	18	346	-
6.	ಬಾಗಲಕೋಟೆ	17	40	25	279	35
7.	ಬಿಜಾಪುರ	14	53	33	336	38
8.	ಬಳ್ಳಾರಿ	-	-	-	338	-
	ಒಟ್ಟು	116	255	165	2633	459

ಶ್ರೀ **ಪಾಟೀಲ್ ಶಿವಾನಂದ ಸಿದ್ಧರಾಮಗೌಡ:-** ಮಾನ್ಯ ಅಧ್ಯಕ್ಷರೆ, ಈಶಾನ್ಯ ವಲಯಕ್ಕೆ ಸಂಬಂಧಪಟ್ಟಂತೆ ನನ್ನ ಮೊದಲ ಪ್ರಶ್ನೆ ಇದೆ. ಹಿಂದೆ ಇದ್ದಂಥ ಸಚಿವರು ಹೆಚ್ಚಿನ ಕಾಳಜಿ ವಹಿಸಿಕೊಂಡು ಈಶಾನ್ಯ ವಲಯವನ್ನು ಸ್ಥಾಪನೆ ಮಾಡಿದರು. ಆದ್ದರಿಂದ ಅವರಿಗೆ ಈ ಸಂದರ್ಭದಲ್ಲಿ ನಾನು ಧನ್ಯವಾದಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ, ಇದು ಸ್ಥಾಪನೆ ಆಗಿರತಕ್ಕಂಥದನ್ನು ನೋಡಿ ನಮಗೆ ಏನು ಜ್ಞಾಪಕಕ್ಕೆ ಬರುತ್ತದೆ ಎಂದರೆ, ಉತ್ತರ ಕರ್ನಾಟಕದ ಜನರ ಬೇಡಿಕೆ ಮೇರೆಗೆ ಉತ್ತರ ವಲಯಕ್ಕೆ ಸಣ್ಣ ನೀರಾವರಿ ಕಛೇರಿಯನ್ನು ಕೊಟ್ಟರು. ಅಲ್ಲಿಗೆ ಕಛೇರಿ ಮಾತ್ರ ಬಂತು. ಆದರೆ, ಕೆಲಸ ಮಾತ್ರ ಬರಲಿಲ್ಲ. ಇದು ತಮಗೂ ಕೂಡ ಗೊತ್ತಿರಬಹುದು. ಆದರೆ ಇಲ್ಲಿ ಸುದೈವದಿಂದ ಸ್ವಲ್ಪ ಹಣ ಬರುತ್ತಿದೆ. ಆದರೆ, ಅಲ್ಲಿರುವ ನಿರ್ದೇಶಕರು ಯಾವುದೇ ಒಂದು ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಈ ಸಂದರ್ಭದಲ್ಲಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈಶಾನ್ಯ ವಲಯಕ್ಕೆ ಹಣ ಕೊಟ್ಟಿರುತ್ತೀರಿ. ಆದರೆ, ಪ್ರತಿಯೊಂದು ಯೋಜನೆಗೆ ಸಂಬಂಧಪಟ್ಟಂತೆ ನಿರ್ದೇಶಕರು ಅಲ್ಲಿಗೆ ಬಂದು ಅಲ್ಲಿನ ವಸ್ತುಸ್ಥಿತಿಯನ್ನು ನೋಡಿಕೊಂಡು ಕಾರ್ಯಕ್ರಮವನ್ನು ಹಮ್ಮಿಕೊಂಡರೆ ಮಾತ್ರ ಈಶಾನ್ಯ ವಲಯ ಮಾಡಿರತಕ್ಕಂಥ ಉದ್ದೇಶ ಈಡೇರುತ್ತದೆ. ಆದರೆ, ನಮ್ಮ ದುರ್ದೈವ ಏನಾಗಿದೆ ಎಂದರೆ, ಅಲ್ಲಿಗೆ ಬರತಕ್ಕಂಥ ನಿರ್ದೇಶಕರೆಲ್ಲರೂ ಕೂಡ ಬೆಂಗಳೂರಿನವರೇ ಇರುತ್ತಾರೆ. ಉತ್ತರ ಕರ್ನಾಟಕದವರು ಬೆನ್ನುಹತ್ತಿ ಸಣ್ಣ ನೀರಾವರಿ ಇಲಾಖೆಯ ಮುಖ್ಯ ಇಂಜಿನಿಯರ್ ಕಛೇರಿಯನ್ನು ಬಿಜಾಪುರಕ್ಕೆ ವರ್ಗಾವಣೆ ಮಾಡಿಸಿಕೊಂಡೆವು ಆದರೆ, ಮುಖ್ಯ ಇಂಜಿನಿಯರ್‌ರವರು ಮೂರು ತಿಂಗಳಾದರೂ ಅಲ್ಲಿಗೆ ಬರುತ್ತಿರಲಿಲ್ಲ. ಈ ಈಶಾನ್ಯ ವಲಯದ ಡೈರೆಕ್ಟರ್‌ಗಳ ಹಣೆಬರಹವು ಅಷ್ಟೇ. ಬೆಂಗಳೂರಿನವರನ್ನು ಅಲ್ಲಿಗೆ ಹಾಕುತ್ತೀರಿ, ಅವರು ವಾರದಲ್ಲಿ 2 ಅಥವಾ 3 ದಿವಸ ಬರುತ್ತಾರೆ ಮಿಕ್ಕ ದಿವಸದಲ್ಲಿ ಅವರು ಇಲ್ಲಿಯೇ ಇರುತ್ತಾರೆ. ಈಶಾನ್ಯ ವಲಯಕ್ಕೆ ಇವರೇನು ಹಣವನ್ನು ಬಿಡುಗಡೆ ಮಾಡುತ್ತಾರೆ. ತಾವು ಬಿಡುಗಡೆ ಮಾಡಿರತಕ್ಕ ಹಣವನ್ನು ನಿಮ್ಮ ಗೌರ್ನಮೆಂಟ್ ಜಿ.ಓ. ಹೇಳುತ್ತದೆ ಶಾಸಕರ ಕೋರಿಕೆಯ ಮೇರೆಗೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕೆಂದು ಹೇಳುತ್ತದೆ. ಹಣವು ಜಿಲ್ಲಾ ಪಂಚಾಯಿತಿಗೆ ಬರುತ್ತದೆ. ಆ ಜಿಲ್ಲಾ ಪಂಚಾಯಿತಿಯವರು ಏನು ಮಾಡುತ್ತಾರೆಂದರೆ, ಬಂದ ಹಣವನ್ನು ಆ ಶಾಸಕರ ಕೋರಿಕೆಯನ್ನು ಮೂಲೆಯಲ್ಲಿ ಇಡುತ್ತಾರೆ. ಅವರದೇ ಆದ ಕ್ರಿಯಾ ಯೋಜನೆಯನ್ನು ಮಾಡುತ್ತಾರೆ. ಕ್ರಿಯಾ ಯೋಜನೆಯನ್ನು ಮಾಡಿದ ಮೇಲೆ ಶಾಸಕರು ಕೊಟ್ಟಿರತಕ್ಕಂಥ ಒಂದು ಪತ್ರ ಅಥವಾ ಯಾವುದೋ ಒಂದು ಕಾಮಗಾರಿಯನ್ನು ಕೈಗೆತ್ತಿಕೊಳ್ಳತಕ್ಕಂತಹ ಪ್ರಕ್ರಿಯೆ ಅಲ್ಲಿ ಆಗುವುದಿಲ್ಲ. ನಿಮ್ಮ ಕಮೀಷನರ್ ಆಫೀಸ್‌ನಿಂದ ಇನ್‌ಸ್ಟ್ರಕ್ಷನ್ಸ್ ಕ್ಲಿಯರಾಗಿರುತ್ತದೆ. ಬೇಕಾದರೆ ತಮಗೆ ಆರ್ಡರ್ ಕಾಪಿಯನ್ನು ತೋರಿಸುತ್ತೇನೆ. ನನ್ನ ಕಡೆ ಆರ್ಡರ್ ಕಾಪಿ ಇದೆ. ಅದರಲ್ಲಿ 11ನೆಯ ಹಣಕಾಸು ಆಯೋಗದಲ್ಲಿದ್ದಂತಹ ಮೊತ್ತದಲ್ಲಿ, ಇದರ ಬಗ್ಗೆ ನಿಮಗೆ ಹೇಳಬೇಕಾದರೆ ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಒಂದೂವರೆ ಕೋಟಿ ರೂಪಾಯಿಗಳು ಕಳೆದ ಒಂದೂವರೆ ವರ್ಷದಿಂದ ಖರ್ಚಾಗಿರುವುದಿಲ್ಲ. ಆ ಜಿಲ್ಲಾ ಪಂಚಾಯಿತಿಯಲ್ಲಿಯೇ ಹಣ ಇದೆ. ಎಲ್ಲಾ ಜಿಲ್ಲಾ ಪಂಚಾಯಿತಿಯ ಸದಸ್ಯರು ಅವರೇ ಪ್ಲಾನ್ ಮಾಡುತ್ತಾರೆ. ಅವರೇ ಕಂಟ್ರಾಕ್ಟ್ ಮಾಡುತ್ತಾರೆ. ಇದುವರೆವಿಗೂ ಆ ಕೆಲಸವನ್ನು ಕೈಗೆತ್ತಿಕೊಂಡಿರುವುದಿಲ್ಲ. ನಾವು ಪತ್ರವನ್ನು ಬರೆದು ಬರೆದು ಕೊನೆಗೆ ನಿಮ್ಮ ಕಮೀಷನರ್ ಕಡೆಯಿಂದ ಡೈರೆಕ್ಷನ್ ಕೊಡಿಸಿದೆವು. ಶಾಸಕರು ಕೋರಿಕೆಯ ಮೇರೆಗೆ ಏನು ಪಟ್ಟಿಯನ್ನು ಕೊಟ್ಟಿದ್ದಾರೆ. ಅದಕ್ಕೆ ತಾವು ಮಾನ್ಯತೆಯನ್ನು ಕೊಟ್ಟು

ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕೆಂದು ಆದೇಶವನ್ನು ಕೊಟ್ಟರೂ ಕೂಡ ಒಂದೂವರೆ ವರ್ಷದಿಂದ ಇಲ್ಲಿಯವರೆವಿಗೂ ಇಂಪ್ಲಿಮೆಂಟಾಗಿಲ್ಲ. ಆದರಲ್ಲೂ ವಿಶೇಷವಾಗಿ ಪಟ್ಟಣ ಪ್ರದೇಶಗಳಲ್ಲಿ, ನಿಮಗೆ ಹೇಳಬೇಕಾದರೆ ನನಗೆ ಪಟ್ಟಣ ಪ್ರದೇಶಗಳು ಬರುವುದಿಲ್ಲ. ಆದರೆ ಫೋಟೋವನ್ನು ಮಾನ್ಯ ಅಧ್ಯಕ್ಷರೆ ತಮಗೆ ಕಳುಹಿಸಿಕೊಡುತ್ತೇನೆ. ಒಂದು ಶಾಲೆಯ ದುಸ್ಥಿತಿಯ ಬಗ್ಗೆ ಹೇಳಬೇಕಾದರೆ ಯಾವ ಮಟ್ಟಕ್ಕೆ ನಮ್ಮ ಶಾಲೆಗಳು ಬಂದಿವೆ ಎಂದು ಹೇಳಬೇಕಾಗಿದೆ. ಒಂದು ಶಾಲೆಯು ಬಿದ್ದಿರುವುದನ್ನು ನೋಡಬೇಕಾದರೆ ಇವರ ಕಮೀಷನರ್‌ರವರು ಬಂದು ನೋಡಿದರು, ಈಶಾನ್ಯ ವಲಯದ ನಿರ್ದೇಶಕರು ಬಂದು ನೋಡಿಹೋದರು, ಎಂಎಲ್‌ಎ,ಎಂ.ಪಿ ಆದರಲ್ಲೂ ವಿಶೇಷವಾಗಿ ಕೇಂದ್ರ ಸರ್ಕಾರದ ಸಚಿವರೂ ಕೂಡ ಬಂದು ನೋಡಿ ಹೋದರು. ಆದರೂ ಸಹ ಶಾಲೆಯ ದುರಸ್ತಿಯಾಗುತ್ತಿಲ್ಲ. ಏಕೆಂದರೆ ಪಟ್ಟಣ ಪ್ರದೇಶಗಳಲ್ಲಿ ಬರತಕ್ಕಂತಹ ಶಾಲೆಗಳಿಗೆ ಯಾವ ಜಿಲ್ಲಾ ಪಂಚಾಯಿತಿಯ ಸದಸ್ಯರುಗಳು ವಾರಸುದಾರರಾಗುವುದಿಲ್ಲ ಆದರೂ ಕೂಡ ಹಣ ಬಿಡುಗಡೆಯಾಗುವುದು ಜಿಲ್ಲಾ ಪಂಚಾಯಿತಿಗೆ, ಆದಕ್ಕೆ ತಾವ ದಯಮಾಡಿ ಈ ಎರಡು ಪ್ರಶ್ನೆಗಳಿಗೆ ಉತ್ತರ ಕೊಡಬೇಕೆಂದು ಕೇಳುತ್ತೇನೆ. ಆದರ ಬಗ್ಗೆ ಮಾನ್ಯ ಸಚಿವರು ಏನು ಉತ್ತರವನ್ನು ಕೊಡುತ್ತಾರೋ ಕೊಡಲಿ. ಇದರ ಬಗ್ಗೆ ತಮಗೆ ಫೋಟೋವನ್ನು ಕಳುಹಿಸಿಕೊಡುತ್ತೇನೆ, ತಾವೇ ನೋಡಿ.

ಪ್ರೊ ಬಿ.ಕೆ. ಚಂದ್ರಶೇಖರ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡರವರು ಒಂದು ವಿಚಾರವನ್ನು ಒಪ್ಪಿಕೊಂಡರೂ ಕೂಡ ಕೆಲಸವಾಗುತ್ತಿಲ್ಲವೆಂದು ಹೇಳಿದರು. ಹಣವು ಸಾಕಷ್ಟು ಬಿಡುಗಡೆಯಾಗುತ್ತಿದೆ, ವಿಶೇಷವಾಗಿ ಏಳು ಜಿಲ್ಲೆಗಳಿಗೆ ಏನು ಭರವಸೆಯನ್ನು ಕೊಟ್ಟಿದ್ದರೋ, ಅದರ ಪ್ರಕಾರವಾಗಿ ಕೊಠಡಿಗಳನ್ನು ಕಟ್ಟುವುದಕ್ಕೆ ಸಂಬಳವನ್ನು ಕೊಡುವುದಕ್ಕೆ ಹಣ ಬಿಡುಗಡೆಯಾಗಿದೆ. ಈ ಸರ್ಕಾರದ ಬಹಳ ಮುಖ್ಯವಾದ ಸಾಧನೆ ಎಂದರೆ, ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಹೆಚ್ಚುವರಿ ಶಿಕ್ಷಕರು ಏನಿದ್ದಾರೆ, ಹುದ್ದೆಗಳನ್ನು ತುಂಬದೆ ಖಾಲಿ ಇದ್ದ ಶಿಕ್ಷಕರ ಸ್ಥಾನಗಳಿತ್ತೋ ಅದರಲ್ಲಿ 2600 ಪ್ರಾಥಮಿಕ ಶಾಲಾ ಶಿಕ್ಷಕರನ್ನು ಇಲ್ಲಿಗೆ ಅಂದರೆ 7 ಈಶಾನ್ಯ ಜಿಲ್ಲೆಗಳಿಗೆ ವರ್ಗಾಯಿಸಲಾಗಿದೆ. ಮೊನ್ನೆ ನಾವು ಏನು ತೆರವು ಮಾಡಿಸಿದ್ದೆವೋ, ಅಂದರೆ ಕರ್ನಾಟಕ ಅಡ್ಮಿನಿಸ್ಟೇಟೀವ್ ಟ್ರಿಬ್ಯೂನಲ್‌ನಲ್ಲಿ ಸ್ಟೇ ಆರ್ಡರನ್ನು ತೆರವು ಮಾಡಿಸಿ 12500 ಜನ ಶಿಕ್ಷಕರನ್ನು ನೇಮಕ ಮಾಡುವುದಕ್ಕೆ ಈಗಾಗಲೇ ಪ್ರಕ್ರಿಯೆ ಮುಗಿಸಿಬಿಟ್ಟಿದ್ದೇವೆ. ಆದರಲ್ಲಿ 2600ರ ಶಿಕ್ಷಕರ ಹುದ್ದೆಗಳನ್ನು ಇಲ್ಲಿಗೆ ವರ್ಗಾಯಿಸಿದ್ದೇವೆ. ಅವರನ್ನು ಅಪಾಯಿಂಟ್ ಮಾಡುತ್ತಿದ್ದೇವೆ. ಇದು ಬರೀ ಪೇಪರ್‌ನಲ್ಲಿ ಅಲ್ಲ, ಇದು ಆಗುತ್ತಿರುವ ಕೆಲಸವಾಗಿದೆ. ಬೆಂಗಳೂರಿನವರನ್ನು ಇಲ್ಲಿಗೆ ಹಾಕಿದರೆ ಅವರು ಬರುವುದಿಲ್ಲ ವಾರಕ್ಕೆ ಎರಡು ದಿವಸ ಇರುತ್ತಾರೆಂದು ಮಾನ್ಯ ಸದಸ್ಯರು ಹೇಳಿದರು. ಇದನ್ನು ಖಂಡಿತ ಸರಿ ಮಾಡಬೇಕು. ಈ ಏಳು ಈಶಾನ್ಯ ಜಿಲ್ಲೆಗಳಿಗೆ ವಿಶೇಷವಾದ ವ್ಯವಸ್ಥೆಯನ್ನು ಮಾಡಿ ಇನ್ನು ಹೆಚ್ಚು ಕಡಿಮೆ ಒಂದು ವರ್ಷವಾಗಿಲ್ಲ. ಇದನ್ನು ಕಳೆದ ವರ್ಷ ಮಾಡಿದ್ದೇವೆ. ಸ್ವಲ್ಪ ಅದು ಸ್ಟೆಬಿಲೈಸ್ ಆಗಬೇಕು. ಅಲ್ಲೇ ಇದ್ದು ಕೆಲಸ ಮಾಡುವವರನ್ನು ಪೋಸ್ಟ್ ಮಾಡುವಂತಹ ಪ್ರಯತ್ನವನ್ನು ನಾವು ಮಾಡುತ್ತೇವೆ. ಇವರು ಅಲ್ಲಿಗೆ ಹೋಗುವುದು ಎರಡು ದಿವಸ ಇರುವುದು ವಾಪಸ್ಸು ಬರುವುದನ್ನು ಮಾಡಿದರೆ ಕೆಲಸವಾಗುವುದಿಲ್ಲ. ಇದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ, ಇದರ ಬಗ್ಗೆ ನನ್ನ ಭಿನ್ನಾಭಿಪ್ರಾಯವಿಲ್ಲ. ಆದರ ಬಗ್ಗೆ ಸ್ವಲ್ಪ ಎಕ್ಸಾಮಿನ್ ಮಾಡುತ್ತೇನೆ. ಯಾರು ಆ ತರಹ

ಇದ್ದಾರೆ, ಅಲ್ಲೇ ಯಾರು ಇರಬಹುದು, ಯಾರನ್ನು ಅಪಾಯಿಂಟ್ ಮಾಡಬಹುದು ನೋಡಿ ಏನು ಅವಶ್ಯಕವಾದ ಬದಲಾವಣೆಗಳಿವೆ ಅದನ್ನು ಮಾಡುವುದಕ್ಕೆ ನಾನು ತಯಾರಿದ್ದೇನೆ. ಜಿಲ್ಲಾ ಪಂಚಾಯಿತಿಗೆ ಪಟ್ಟಿ ಕೊಡುವುದು, ಇದೊಂದು ವ್ಯವಸ್ಥೆಯಲ್ಲಿರುವ ನೀವು ವೈರುದ್ಯತೆಯೆಂದು ಬೇಕಾದರೆ ಕರೆಯಬಹುದು ಶಾಸಕರು ಕೆಲಸವನ್ನು ಎಲ್ಲಿ ಮಾಡಬೇಕೆಂಬ ಬಗ್ಗೆ ಕೊಡುವ ಪಟ್ಟಿಯನ್ನು ಕೂಡ ಜಿಲ್ಲಾ ಪಂಚಾಯಿತಿಯವರು ಕೊಡಬೇಕಾಗುತ್ತದೆ. ಅದು ಕಾನೂನಿನಲ್ಲಿ ಅಳವಡಿಸಿರುವ ಒಂದು ವಿಚಾರ. ಅದನ್ನು ಬದಲಾವಣೆ ಮಾಡುವುದಕ್ಕೆ ಬರುವುದಿಲ್ಲ. ಅದರೊಳಗಡೆ ಜಿಲ್ಲಾ ಪಂಚಾಯಿತಿಯವರು ನಿಧಾನ ಮಾಡಿದರೆ, ಏಕೆ ನಿಧಾನ ಮಾಡುತ್ತಿದ್ದೀರಿ ಎಂದು ಕೇಳುವ ಹಕ್ಕು ನಮಗೆ ಇದೆ. ನಮ್ಮ ಇಲಾಖೆಯಿಂದ ಅದನ್ನು ನಾವು ಮಾಡಬಹುದು.

ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ:– ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ನೀವು ಸ್ಟೇಟ್ ಸೆಕ್ಟಾರ್‌ನಿಂದ ಕೊಟ್ಟಿದ್ದಾಗಲಿ, ಬೇರೆ ಯಾವುದಾದರೂ ಹಣವನ್ನು ಕೊಟ್ಟಿದ್ದರೆ ಅದನ್ನು ಅವರು ಅಡೆತಡೆ ಮಾಡಲಿ ಬೇಡ ಅವರು ಆಕ್ಷನ್ ಪ್ಲಾನ್ ಇಟ್ಟುಕೊಂಡು ಮಂಜೂರು ಮಾಡಲಿ. ಆದರೆ ನೀವು 11ನೇ ಫೈನಾನ್ಸ್ ಕಮಿಷನ್‌ನ ಅಮೌಂಟ್‌ನ್ನು ಕೊಟ್ಟಿರುವುದನ್ನು ಒಂದೂವರೆ ವರ್ಷದಿಂದ 2-2 ಕೋಟಿ ರೂಪಾಯಿಗಳನ್ನು ಒಂದೇ ಜಿಲ್ಲಾ ಪಂಚಾಯಿತಿಯಲ್ಲಿ ಉಳಿದರೆ ನೀವೇ ಹೇಳಿ ಯಾವ ತರಹದ ರಿಸಲ್ಟ್ ಬರುತ್ತದೆ? ಮತ್ತೊಂದು ಕಡೆ ತಾವು ನೋಡಿದ್ದೀರಿ, ಒಳ್ಳೆಯ ಬಿಸಿ ಬಿಸಿ ಊಟವನ್ನು ಹಾಕುತ್ತಿದ್ದೀರಿ ಆದರೆ ಕೂರುವುದಕ್ಕೆ ಸ್ಥಳವೇ ಇಲ್ಲ, ಎಲ್ಲಿ ಕೂರಬೇಕು? ಅಟಲೀಸ್ಟ್ ಊಟ ಮಾಡುವುದಕ್ಕಾದರೂ ಸ್ಥಳವನ್ನು ಕೊಟ್ಟರೆ ಒಳ್ಳೆಯದಾಗುತ್ತದೆ.

ಪ್ರೊ: ಬಿ.ಕೆ. ಚಂದ್ರಶೇಖರ್:– ಮಾಡೋಣ. ಈಗ ತಾನೇ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಫಂಡ್‌ನಿಂದ ಸ್ವಲ್ಪ ಹಣ ಬಂದಿದೆ. ಮತ್ತೆ ಹುಡ್ಕೋದಿಂದ ಸಹ ಸ್ವಲ್ಪ ಹಣ ಬಂದಿರುತ್ತದೆ. ಪ್ರೌಢಶಾಲೆಗಳಿಗೆ ಕಟ್ಟಡ ಕಟ್ಟಿಸುವುದಕ್ಕೆ ಹಣ ಬಂದಿರುತ್ತದೆ ಇದೆಲ್ಲವೂ ಆಗುತ್ತದೆ. ಇಷ್ಟು ವರ್ಷ ಆಗದೆ ಇರುವಂತಹ ಕೆಲಸಗಳು ಅಂದರೆ 15-20 ವರ್ಷಗಳಿಂದ ಆಗಿರಲಿಲ್ಲ, ಅದು ಇವತ್ತಿನಿದಲ್ಲ. ಕನಿಷ್ಠಪಕ್ಷ ಕಳೆದ 1-1½ ವರ್ಷದಿಂದ ಬಹಳ ಚುರುಕಾಗಿ ಕೆಲಸಗಳು ಶುರುವಾಗಿದೆ. ಈಗ ಹಣದ ತೊಂದರೆ ಏನಿಲ್ಲ, ಅದನ್ನು ಮಾಡೋಣ, ಪಟ್ಟಣ ಪ್ರದೇಶದ ಬಗ್ಗೆ ತಾವು ಹೇಳಿದ್ದೀರಿ, ಜಿಲ್ಲಾ ಪಂಚಾಯಿತಿಯವರು ಆಸಕ್ತಿಯನ್ನು ವಹಿಸುವುದಿಲ್ಲವೆಂದು ಪ್ರಸ್ತಾಪ ಮಾಡಿದ್ದೀರಿ, ಅದು ನಿಜ ಈ ಎರಡು ವಿಚಾರಗಳಿಗೆ ನಾವು ಏನಾದರೂ ಬೇರೆ ಇನ್‌ಸ್ಟ್ರಕ್ಷನ್ಸ್ ನಮ್ಮ ಇಲಾಖೆಯ ವತಿಯಿಂದ ಕೊಡಬಹುದೇ ಮತ್ತೆ ಮಾನಿಟರ್ ಮಾಡಬಹುದೇ ಎನ್ನುವುದನ್ನು ಪರಿಶೀಲಿಸಿ, ಗುಣಮಟ್ಟವನ್ನು ಹೆಚ್ಚು ಮಾಡುವುದಕ್ಕೆ ಇಂಪ್ರೂವ್ ಮಾಡುವುದಕ್ಕೆ ನಾನು ಖಂಡಿತ ಪ್ರಯತ್ನ ಮಾಡುತ್ತೇನೆ.

ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ:– ತಾವು ಬಿಜಾಪುರ ಸಿಟಿಯ ಸ್ಕೂಲ್ ನಂ:9ನ್ನು ನೋಟ್ ಮಾಡಿಕೊಳ್ಳಿ. ಕಳೆದ 7 ವರ್ಷದಿಂದ ಶಾಲೆ ಬಿದ್ದಿದೆ ಆ ಸ್ಥಾನದ ಶಾಸಕರೇ ಮಂತ್ರಿಗಳಾಗಿದ್ದಾರೆ, ಅವರು ಪಾಪ ಹೋಗಿದ್ದಾರೋ ಬಿಟ್ಟಿದ್ದಾರೋ ನನಗೆ ಗೊತ್ತಿಲ್ಲ. ಅಲ್ಲಿ ಜನರು ರಸ್ತೆ ರೋಕೋ ಮಾಡಿ ಅದರ ಬಗ್ಗೆ ಕಟಿಂಗ್ಸ್‌ನ್ನು ನಾನು ಬೇಕಾದರೆ ತಮಗೆ ಕಳುಹಿಸಿಕೊಡುತ್ತೇನೆ. ವಿಶೇಷವಾಗಿ ಬಿಜಾಪುರ ಸಿಟಿ ಸ್ಕೂಲ್ ನಂ:9 ಏನಿದೆ ಅಲ್ಲಿ ಮಕ್ಕಳ ಪರಿಸ್ಥಿತಿಯ ಬಗ್ಗೆ ಬೇಕಾದರೆ ನಿಮ್ಮ ಕಮೀಷನರ್‌ರವರನ್ನು ಕೇಳಿಕೊಳ್ಳಬಹುದು, ಅವರು ಸಹ

ಹೋಗಿದ್ದಾರೆ. ಈಶಾನ್ಯ ವಲಯದ ಡೈರೆಕ್ಟರ್ ಕೂಡ ಹೋಗಿದ್ದಾರೆ, ಅಟ್‌ಲೀಸ್ಟ್ ಅದನ್ನು ರಿಪೇರಿ ಮಾಡಿಸತಕ್ಕಂತಹ ಒಂದು ಸೌಜನ್ಯತೆಯನ್ನು ತೋರಿಸಿಬಿಡಿ ಸಾಕು.

ಪ್ರೊ।। ಬಿ.ಕೆ. ಚಂದ್ರಶೇಖರ್:– ಖಂಡಿತ ಮಾಡುತ್ತೇನೆ.

ಪ್ರಶ್ನೆ ಸಂಖ್ಯೆ: 174(1580) ಮತ್ತು ಪ್ರಶ್ನೆ ಸಂಖ್ಯೆ: 175(1384)

ಅಧ್ಯಕ್ಷರು:– ಸಂಬಂಧಪಟ್ಟ ಸಚಿವರು ಇಲ್ಲದೇ ಇರುವುದರಿಂದ ಈ ಎರಡು ಪ್ರಶ್ನೆಗಳನ್ನು ನಾಳೆ ತೆಗೆದುಕೊಳ್ಳೋಣ.

ಕುಷ್ಟಗಿ ತಾಲ್ಲೂಕಿನಲ್ಲಿ ಬರುವ ನಿಡಶೇಷ ಕೆರೆಗೆ ಖರ್ಚಾಗಿರುವ ಹಣ

165(1204) ಶ್ರೀ ಹಸನಸಾಬ್ ನಬೀಸಾಬ್ ಧೋತಿಹಾಳ್(ಕುಷ್ಟಗಿ) ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಷ್ಟಗಿ ತಾಲ್ಲೂಕಿನಲ್ಲಿ ಬರುವ ನಿಡಶೇಷ ಕೆರೆಗೆ ಇಲ್ಲಿಯವರೆಗೆ ಖರ್ಚಾಗಿರುವ ಹಣವೆಷ್ಟು

ಆ) ಈ ಕೆರೆಯಿಂದ ಎಷ್ಟು ಹೆಕ್ಟೇರ್ ಜಮೀನು ನೀರಾವರಿ ಸೌಲಭ್ಯ ಪಡೆಯಲಿದೆ:

ಇ) ಕೆರೆ ಸಂಪೂರ್ಣಗೊಳ್ಳಲು ಬೇಕಾಗುವ ಸಮಯಾವಕಾಶವೆಷ್ಟು?

ಶ್ರೀ ಮಲ್ಲಿಕಾರ್ಜುನಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) ರೂ. 896.14ಲಕ್ಷ ಖರ್ಚಾಗಿರುತ್ತದೆ.

ಆ) 860 ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ ದೊರೆಯಲಿದೆ.

ಇ) ಕೆರೆಯ ಒಡ್ಡು ಕೋಡಿ ಪೂರ್ಣಗೊಂಡಿದ್ದು, ಕಾಲುವೆ ಕೆಲಸ ಭಾಗಶಃ ಮುಗಿದಿರುತ್ತದೆ. ಆದರೆ ಭೂ ಪರಿಹಾರ ನೀಡುವವರೆಗೆ ರೈತರು ಉಳಿದ ಕಾಲುವೆ ಕೆಲಸ ಮಾಡಲು ತಡೆಯೊಡ್ಡಿರುತ್ತಾರೆ. ಭೂ ಪರಿಹಾರದ ಹಣವನ್ನು ಈಗ ಠೇವಣಿ ಮಾಡಲಾಗಿದೆ. ಅವಾರ್ಡ್ ಆದ ತಕ್ಷಣ 6 ತಿಂಗಳಲ್ಲಿ ಕೆಲಸ ಪೂರ್ಣಗೊಳಿಸಲಾಗುವುದು.

ಶ್ರೀ ಹಸನ್ ಸಾಬ್ ನಬೀಸಾಬ್ ಧೋತಿಹಾಳ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ, ಈ ಒಂದು ಕೆರೆಗೆ ಇವತ್ತು ಸರ್ಕಾರದವರು 9 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ, ಆದರೆ ಭೂಸ್ವಾಧೀನಕ್ಕಾಗಿ ಹಣವನ್ನು ತುಂಬಿಲ್ಲ. ಈ ಭೂಸ್ವಾಧೀನದ ಹಣವನ್ನು ತುಂಬದೆ ಇರುವುದರಿಂದ ಈ ಒಂದು ಕೆಲಸಗಳನ್ನು ಪೂರ್ತಿ ಮಾಡುವುದಕ್ಕೆ ರೈತರುಗಳು ಬಿಡುತ್ತಿಲ್ಲ. ಆದರೆ ಅಧಿಕಾರಿಗಳು ಹಣವನ್ನು ತುಂಬಿದ್ದೇವೆ ಎಂಬ ಮಾಹಿತಿಯನ್ನು ಕೊಟ್ಟಿದ್ದಾರೆ. ಆದರೆ ಭೂಸ್ವಾಧೀನಕ್ಕೆ ಸಂಬಂಧಪಟ್ಟಂತಹ ಅಧಿಕಾರಿಗಳನ್ನು ವಿಚಾರಿಸಿದಾಗ ಸಂಪೂರ್ಣವಾದಂತಹ ಹಣವನ್ನು ತುಂಬಿಲ್ಲವೆನ್ನತಕ್ಕಂತಹ ಉತ್ತರವನ್ನು ಅಲ್ಲಿನ ಅಧಿಕಾರಿಗಳು ತಿಳಿಸಿದ್ದಾರೆ. ಇವತ್ತು ನಾವು 9 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಬಯಲು ಸೀಮೆಯಲ್ಲಿರತಕ್ಕಂತಹ ಪ್ರದೇಶದಲ್ಲಿ ಒಳ್ಳೆಯ ಕೆರೆಯನ್ನು ನಿರ್ಮಾಣ ಮಾಡಲು ಸರ್ಕಾರ 9 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದಾಗ ಸುಮಾರು 8 ರಿಂದ 10 ಲಕ್ಷ ರೂಪಾಯಿಗಳ ಹಣವನ್ನು ಭೂಸ್ವಾಧೀನಕ್ಕೆ ತುಂಬಿದರೆ ಈ ಕೆಲಸವನ್ನು ಪೂರ್ತಿ ಮಾಡುವುದಕ್ಕೆ ರೈತರು ಅನುಕೂಲವನ್ನು ಮಾಡಿಕೊಡುತ್ತಾರೆ. ಆದರೆ ಅಧಿಕಾರಿಗಳು ಈ ಹಣವನ್ನು ತುಂಬುವುದಕ್ಕೆ ಆಸಕ್ತಿಯನ್ನು ವಹಿಸುವುದಿಲ್ಲ. ಸುಮಾರು ಒಂದು ವರ್ಷದಿಂದ ರೈತರುಗಳು ಮತ್ತು ನಾವು ಎಷ್ಟೇ ಕೇಳಿಕೊಂಡರೂ ಸಹ ಮೊನ್ನೆ ತಾನೇ ಹಣವನ್ನು ತುಂಬಿದ್ದಾರೆ. ಭೂಸ್ವಾಧೀನ ಪೂರ್ತಿ